RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಹ್ಮೇದಾರ್ ಎಂ. ವಿ. ಸುಬ್ಬರಾಮಯ್ಯರು [ಬಿಡಿ ಪ್ರತಿ 3 ಪೈ

12—2—1962

ಸಮಸ್ತ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಸ್ವರ್ಗೀಯ ರಾಜ್ಯ

ಉತ್ತರ ಪ್ರದೇಶದಲ್ಲಿ ಗಂಗಾ ತೀರದಲ್ಲಿರುವ ಪುಂಡಿಜಯ ಗ್ರಾಮದ ಪಂಚಾಯಿತಿಯ ಎಲ್ಲ ಸದಸ್ಯರು ಸ್ತ್ರೀಯರೇ ಆಗಿದ್ದಾರೆ

ಒಪ್ಪಂದ ವಿಮರ್ಶೆ

ಅಮೆರಿಕ ಸೇನಾ ಒಪ್ಪಂದವನ್ನು ಪರಾಮರ್ಶಿಸುವುದಾಗಿ ಅಧ್ಯಕ್ಷ ಕೆನೆಡಿಯವರ ವಿಶೇಷ ಅಸಿಸ್ಟೆಂಟು ಸ್ಕೆಲೇಸಿಂಗರರು ಹೈದರಾಬಾದಿನಲ್ಲಿ ತಿಳಿಸಿದ್ದಾರೆ

ಕೇಂದ್ರದೊಡನೆ ಚರ್ಚೆ

ಏಷ್ಯಾ ರಾಷ್ಟ್ರಗಳೊಡನೆ ಸೇನಾ ಒಡಂಬಡಿಕೆಯನ್ನು ಕುರಿತು ಥಾಯಂಕ್ಕೆ ಭೇಟಿಕೊಡುವ ಚೆಸ್ಟರ್ ಬೌಲ್ಸರು ಥಾಯ್ ಸರ್ಕಾರದೊಡನೆ ಚರ್ಚಿಸುವರು

ಹತ್ತು ಲಕ್ಷರೂ ಮಂಜೂರು

ಪೋರ್ಚುಗೀಸರು ನಾಶಮಾಡಿದ ಕಟ್ಟಡಗಳ ರಿಪೇರಿಗೆ ಗೋವಾ ಸರ್ಕಾರ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದೆ

ಅಭ್ಯರ್ಥಿಗಳಿಗೆ ಕೆಲಸ

ಮಾರ್ಚ್‌ನಲ್ಲಿ ಜರುಗಲಿರುವ ಚುನಾವಣಾ ಕ್ಷೇತ್ರದಲ್ಲಿ ಪಾಕಿಜು ಸರಿಯಾಗಿಲ್ಲದ ಲಿಸ್ಟ್‌ಯನ್ನು ಗುಡಿಸುವಂತೆ ಅಲ್ಲಿಯ ಎಲ್ಲ ಚುನಾವಣಾ ಸ್ಪರ್ಧಿಗಳಿಗೆ ತಿಳಿಸಿರುವುದರಿಂದ. ಜೋಧ್ಪುರ ವಂದಿ ತಿಳಿಸುತ್ತದೆ.

ಮುಷ್ಕರ

ತಿರುಪ್ಪೂರಿನ ಸರ್ಕಾರಿ ವಿದ್ಯಾರ್ಥಿಗಳ ಶಾಲೆಯ ವಿದ್ಯಾರ್ಥಿಗಳು ಶುಕ್ರವಾರ 1 ಗಂಟೆ ಮುಷ್ಕರ ನಡೆಸಿದರು

ಪವಿತ್ರ ಸ್ನಾನ

ಬಸಂತ ಪಂಚಮಿಯಂದು ಗಂಗಾ ಜಮುನಾ ಸಂಗಮದಲ್ಲಿ ಸುಮಾರು ಲಕ್ಷ ಮಂದಿ ಗಂಗಾ ಸ್ನಾನ ಮಾಡಿದರು ದುರ್ಘಟನೆಯೇನೂ ನಡೆಯುಲಿಲ್ಲ.

ಯೇವಣ್ಣ ಹೋಗುತ್ತಂತೆ !

ಡಾ|| ರಾಮಮನೋಹರ ಲೋಹಿಯಾರವರು ರಾಂಚಾಸಿಯಲ್ಲಿ ಹೇಳಿಕೆಯು ಸ್ತಿಸ್ತು, ಪ್ರಧಾನಿ ನೆಹರು ರವರ ಬೆಂಬಲಿಗರಾಗಿ 5 ಸಹಸ್ರ ಮಂದಿ ಲೈಸನ್ಸು, ಪರ್ಮಿಟ್ಟು, ಅರ್ಧ ಸರ್ಕಾರಿ ಲೈಸನ್ಸು ಪಡೆದ ಜನ ಇರುವರೆಂದು, ೨ ರು ತಮ್ಮ ಬೆಂಬಲ ವಾಪಸು ಪಡೆದರೆ ತಾವು ಎದುರಿಸುವ ನೆಹರು ಪೂಲ್ಸರ್ ಕ್ಷೇತ್ರದಲ್ಲಿ ಠೇವಣಿ ಕಳೆದುಕೊಳ್ಳುವರೆಂದು ತಿಳಿಸಿದರು.

ಕುಡಿತ ಹಕ್ಕು

ಭವಾನಿ ಕ್ಷೇತ್ರದಿಂದ ಸ್ಪರ್ಧಿಸಿರುವ ಸ್ವತಂತ್ರ ಸ್ಪರ್ಧಿ ಶ್ರೀ ಸಿ ಲಕ್ಷ್ಮಣ ಪಾದಾರಾಯರು, ಕುಡಿತ ಮೂಲ ಭೂತ ಹಕ್ಕು, ತಾವು ಪಾನಪ್ರತಿಬಂಧ ವಜಾ ಮಾಡಲು ಹೋರಾಡುವುದಾಗಿ ತಿಳಿಸಿದರು.

ಗಾಂಧೀಜಿ ಇಚ್ಛೆ

ಭಾರತ ಕಾಂಗ್ರೆಸು ಅಧ್ಯಕ್ಷ ಪದವಿಗೆ ನಾನು ರಾಜೀನಾಮೆ ಇತ್ತನಂತರ ನಾನು ಪಾರ್ಲಿಮೆಂಟಿನ ಏಕೋಧರ್ಪದ ನಾಯಕನಾಗಬೇಕು ಎಂದು ಗಾಂಧೀಜಿ ನನಗೆ ತಿಳಿಸಿದರು ಎಂದು ಆಚಾರ್ಯ ಕೃಪಲಾನಿ ಬೊಂಬಾಯಿನಲ್ಲಿ ನುಡಿದರು.

ಸಹಾಯಾರ್ಥ ನಾಟಕ

ಈ ಸಂಜೆ 6 ವರೆ ಗಂಟೆಗೆ ಎಚ್ಚಮ ನಾಯಕ ಎಂಬ ನಾಟಕವನ್ನು ಪುರ ಸಭಾ ಕನ್ನಡ ಪ್ರಾಥಮಿಕ ಶಾಲೆಯ ಬಹು ವಿದ್ಯಾರ್ಥಿನಿಯರ ನಿಧಿಗಾಗಿ ಮೈಸೂರು ಪುರಸಭಾ ಸಾಕಂ ಕಲಾಸಂಘದವರು ಪುರಸಭಾಧ್ಯಕ್ಷರಾದ ಶ್ರೀ ಹೆಚ್. ಕೆಂಪೇಗೌಡರ ಅಧ್ಯಕ್ಷತೆಯಲ್ಲಿ ಪುರ ಭವನದಲ್ಲಿ ಅಭಿನಯಿಸುವರು.

oo

ಡಾ|| ಎಂ ಸಿ ನೋದಿಯವರ ನೇತ್ರ ಶಿಬಿರ ಬಳ್ಳಾರಿಯಲ್ಲಿ ಏಪ್ರಿಲ್ 15 ರಿಂದ ಆರಂಭವಾಗುವದು

ನಾಸೆರ್ ಆಜ್ಞೆ

ಪ್ರತಿಯೊಂದು ಕಂಪೆನಿಯ ಡೈರೆಕ್ಟರು ಬೋರ್ಡಿಗೆ ಈರ್ವರು ಕಾರ್ಮಿಕ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಅರಬ ಗಣರಾಜ್ಯದ ನಾಸೆರರು ಕೈರೋದಲ್ಲಿ ಆಜ್ಞೆ ಮಾಡಿದರು.

ಅರಮನೆ ಅಶ್ವಶಾಲಾ ಮತ್ತು
ಗಜಶಾಲಾ ಇಲಾಖೆ,
ಮೈಸೂರು.

ಟೆಂಡರು ನೋಟೀಸು

ಸನ್ 1962–63 ನೇ ಸಾಲಿನಲ್ಲಿ ಅಂದರೆ ತಾರೀಖು 1–4–1962 ರಿಂದ ಆಗಾಯಿತು 31–3–1963 ರ ಪೂರ್ತಿ, ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆಗಳಿಗೂ ಮತ್ತು ಅರಮನೆಯ ದೇವಸ್ಥಾನಗಳಿಗೂ ಸಾಲದ ಸಂಬರಾಯಿ ಹೂಡಲು ಅಪೇಕ್ಷಿಸುವವರು ಸೀಲಾದ ಟೆಂಡರುಗಳನ್ನು 1962 ನೇ ಫೆಬ್ರವರಿ ಮಾಹೆ ತಾರೀಖು 19 ನೇ ಮಧ್ಯಾಹ್ನ 12 ಗಂಟೆಯೊಳಗಾಗಿ ಮೇಲ್ಕಂಡ ಇಲಾಖಾ ಅಫೀಸರ್ ಇನ್ ಚಾರ್ಜರವರಿಗೆ ಈ ಕೆಳಗೆ ತಿಳಿಸಿರುವ ಮೇರೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು.

(1) ಪೂರ್ತ ದಿಂಡಲು ಸಾದೆ ಸರಬರಾಯಿಗೆ.

(2) ಪೂರ್ತ ಕಾಡು ಸಾದೆ ಸರಬರಾಯಿಗೆ.

M. S. Narayanaswamy
Officer-in-Charge
Palace Stables
& Gajasala
Mysore

ಮೈಸೂರು
5-2-1962

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಶ್ಚಿಮ್ಹಸ್ಸ ಜೋಯಿಸರಿಂದ
13 ನವಮಿ ರೋಹಿಣಿ

ವಿವಿಧ ವಿಷಯಗಳು

ನಾಳೆ ಸಂಜೆ 5 ವರೆ ಗಂಟೆಗೆ ಜಗದ್ಗುರು ಶ್ರೀ ಶೃಂಗೇರಿ ಸ್ವಾಮಿಗಳವರಿಗೆ ಮೈಸೂರು ಪೌರಸಭೆ ಪೌರಸ್ವಾಗತವೇರ್ಪಡಿಸಿದೆ ಈ ಮಹೋತ್ಸವಕ್ಕೆ ಪ್ರಜೆಗಳು ಅಗಮಿಸಬೇಕೆಂದು ಕೋರಿದೆ ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

ಹಳೆಯ ಮೈಸೂರು ಬ್ಯಾಂಕು ರಸ್ತೆ ದೊಡ್ಡ ಗಡಿಯಾರದ ಪರಿಗೆ ಸರ್ದಾರ್ ವಲ್ಲಭ್ಭಾಯ್ ಪಟೇಲ್ ರಸ್ತೆ ಎಂದು ನಾಮಕರಣ ಮಾಡಿದೆ.

ನವಗ್ರಹ ಹೋಮದ ಪೂರ್ಣಾಹುತಿ ಮೈಸೂರಿನ ಶಂಕರ ಮಠದಲ್ಲಿ ಈ ದಿನ ಮಧ್ಯಾಹ್ನ ಏರ್ಪಾಟಾಗಿದೆ

ನಿವೇಶನಗಳು ಹಾಗೂ ಅನುಕೂಲ ಬೇಕೆಂದು ಶಿವಮೊಗ್ಗದ ಕಳಗಡಿಸುವವರು ಮುಷ್ಕರಿಸಿರುವರು

ತಿರುಚಿಗೆ ಸಲವತ್ತು ಮೈಲಿಗಳ ದೂರದಲ್ಲಿರುವ ಪೆರಂಬಾಲೂರಿನ ಬಳಿ ಸಿರಿಕುಂಡಾಲ ಗ್ರಾಮದಲ್ಲಿ ಅಗ್ನಿ ಅನಾಹುತದಿಂದ ಮುನ್ನೂರು ಮನೆಗಳು ಭಸ್ಮವಾದವು. ಒಂದೂವರೆ ಸಹಸ್ರ ಮಂದಿ ನಿರ್ವಾಸಿಕರಾದರು

ಶಂಭರ್ಣ ನಿದ್ರೆಯಿಂದ ಜನರು ಎಚ್ಚರಗೊಳ್ಳಬೇಕೆಂದು, ದೇಶದಲ್ಲಿ ಕಾಂಗ್ರೆಸಿನ ಒಂದು ಪಕ್ಷದ ಆಡಳಿತವನ್ನು ವಜಾ ಮಾಡಬೇಕೆಂದು ರಾಜಾಜಿ ಸೂರತ್ತಿನಲ್ಲಿ ತಿಳಿಸಿದರು.

ಕಾಂಗ್ರೆಸಿನಲ್ಲಿರುವ ಸ್ವತಂತ್ರ ಪಕ್ಷದವರು ಕಾಂಗ್ರೆಸು ಬಿಡುವಂತೆ ಅಹಮದಾಬಾದಿನಲ್ಲಿ ಪಂ|| ನೆಹರು ಅಹಮದಾಬಾದಿನಲ್ಲಿ ತಿಳಿಸಿದರು.

ಯೋಧನೆಗಳು ಕಾಂಗ್ರೆಸಿಗರು ಅಧಿಕಾರದಲ್ಲಿ ಇರಲು ಹೂಡಿರುವ ಬಲೆ ಎಂದು ರಾಜಾಜಿ ಹಿಮ್ಮತ್ನಗರದಲ್ಲಿ ತಿಳಿಸಿದರು.

ಅಂತರರಾಷ್ಟ್ರದಂ ಏರಿದ ಕಾರಣ ಭಾರತದ ಸಕ್ಕರೆ ರಫ್ತಿಗೆ ಅವಕಾಶ ಆಗುವದಾಗಿ ಶ್ರೀ ಕನೋರಿಯ ಕಲ್ಕತ್ತಾದಲ್ಲಿ ತಿಳಿಸಿದರು.

ತಿರುಪ್ಪೂರಿನ ಅಭಿವೃದ್ಧಿಗೆ ಮೈಸೂರು ಸರ್ಕಾರ ರೂ 1620 ಗ್ರಾಂಟು ಕೊಟ್ಟಿರುವ ಬಗ್ಗೆ ಅಲ್ಲಿನ ಪೌರಸಭೆ ವಿಸ್ತರಿಸಿದೆ

ಮಾರ್ಮಿಕರಂಗ

ಡಾಕಾಕ್ಯದಲ್ಲಿ ಪರಿಸ್ಥಿತಿ ಶಾಂತತೆಯಿಂದ ಇರುವುದಾದರೂ ಪೂರ್ವಪಾಕಿಸ್ತಾನದ ಒಳಭಾಗದಲ್ಲಿ ವಿದ್ಯಾರ್ಥಿಗಳ ಪ್ರದರ್ಶನಗಳಿನೆಯೆಂದು ಅಧಿಕೃತ ವೃತ್ತಗಳಿಂದ ಗೊತ್ತಾಗಿದೆ .

ಂ ಂ

ಚನಾವಣೆ ಪ್ರಚಾರದಲ್ಲಿ ನಿರತರಾಗಿದ್ದ ಕಾಂಗ್ರೆಸು ಮತ್ತು ದ್ರವಿಡ ಮುನ್ನೇತ್ರ ಕಳಗಂ ಕಾರ್ಯಕರ್ತರಲ್ಲಿ ರಾಮನಾಡು ಜಿಲ್ಲೆಯ ಶ್ರೀವಿಲ್ಲಿಪುತ್ತೂರಿನ ಜಿಲ್ಲೆಯ ಸೆನ್ಕುಲಂ ಗಾ್ರಮದಲ್ಲಿ ಹೊಡೆದಾಟವಾಗಿ ಕಾಂಗ್ರೆಸು ಕಾರ್ಯಕರ್ತನೋರ್ವನು ಅಸ್ಪತ್ರೆಯಲ್ಲಿ ಮರಣಹೊಂದಿದನು. ಈರ್ವರು ಕಾಂಗ್ರೆಸು ಕಾರ್ಯಕರ್ತರಿಗೆ ಗಾಯ ವಾಗಿದೆ. ಈ ಸಂದರ್ಭದಲ್ಲಿ ಡಿ ಎಂ ಕೆ ಯವನೋರ್ವನ ಬಂಧನವಾಗಿದೆ

ಂ ಂ

ನ್ಯೂಯಾರ್ಕಿನ ಮೇಯರಾದ ರಾಬರ್ಟ್ ವಾಗ್ನರ್ ವರ್ಣ ದ್ವೇಷಕ್ಕೆ ರಾಜೀನಾಮೆ ಇತ್ತರು

ಂ ಂ

ಜವಾಹರನ ಉಕ್ಕಿನ ನಿಯೋಗ ಮುಂದಿನ ಮಾಹೆ ಭಾರತಕ್ಕೆ ಆಗಮಿಸಿ ಕಬ್ಬಿಣದ ಅದಿರು ಹಾಗೂ ರೇವಿನ ಸೌಲಭ್ಯ ಕುರಿತು ಪರಿಶೀಲಿಸುವದು.

ಂ ಂ

ಗೋವಾದ ಮಾಜಿ ಸೇನಾ ಬಲಗಳಿಗೆ ಏಂಪಾಯಿ ವೇತನ ಕೊಡಲು ಗವರ್ನರಾಂತಾದ ಕ್ಯಾಂಡೆತ್ ಆಜ್ಞೆ ಮಾಡಿರುವದಾಗಿ ವಾಷಿಂಗ್ಟನ್ ವಾರ್ತೆ

ಂ ಂ

ಈ ಏಪ್ರಿಲಿನಿಂದ ವಿದ್ಯಾಸಿನಲ್ಲಿ ವೃದ್ಧರಿಗೆ ಏಂಪಾಯಿ ವೇತನ ಕೊಡುವ ಕಾನೂನು ಜಾರಿಗೆ ಬರುವದು

ಂ ಂ

ಮೊರಿಂಡ ವಿಧಾನಸಭಾ ಕ್ಷೇತ್ರದಲ್ಲಿ ಅಕಾಲಿ ಬೆಂಬಲಿತ ಅಭ್ಯರ್ಥಿ ಕಡೆಯವ ಗೂ, ಕಾಂಗ್ರೆಸು ಬೆಂಬಲಿತ ಅಭ್ಯರ್ಥಿ ಕಡೆಯವರಿಗೂ ಹೊಡೆದಾಟವಾಗಿ ಕಾಂಗ್ರೆಸಿನ ಕಡೆಯವರೋರ್ವರಿಗೆ ಬಲವಾದ ಹೊಡೆತಬಿದ್ದು ಚಮ್ಮಿರ ಸಾಹಿಬ ಆಸ್ಪತ್ರೆಗೆ ದಾಖಲಾದರು ಗ್ರಾಮದ ಪಂಚರು ಸೇರಿ ಮೂವರು ಜ್ಯುಡಿಸಿಯಲ್ ಲಾಕಪ್ಪಿಗೆ ಸೇರಿಸಲ್ಪಟ್ಟರು.

ಂ ಂ

ಕಮ್ಯೂನಿಸ್ಟ ಚೀನಾದಿಂದ ರಷ್ಯದ ತಾಂತ್ರಿಕರನ್ನು ಸಾಮೂಹಿಕವಾಗಿ ವಾಪಸು ಪಡೆಯಲಾಗುತ್ತಿದೆ ಎಂದು ವಾಷಿಂಗ್ಟನ್ ಪೋಸ್ಟ್ ಪ್ರಕಟಿಸಿದೆ

ಂ ಂ

ರಷ್ಯದಲ್ಲಿ ಗೂಢಚರ್ಯೆ ಆರೋಪದ ಮೇಲೆ ಬಂಧಿತರಾಗಿದ್ದ ಯು-2 ವಿಮಾನ ಚಾಲಕ ಫ್ರಾನ್ಸಿಸ್ ಗ್ಯಾರಿ ಪವರ್ಸ ಬಿಡುಗಡೆ ಮಾಡಲ್ಪಟ್ಟರು ಅಮೆರಿಕದಲ್ಲಿ ಗೂಢಚರ್ಯೆ ನಡೆಸಿದ ರುಡಾಲ್ಫ ಎಬಲ್‌ನನ್ನು ಅಮೆರಿಕ ಬಿಟ್ಟಿದೆ ಈ ಕಾರ್ಯದಿಂದ ಅಮೆರಿಕದೊಡನೆ ಉತ್ತಮ ಸಂಬಂಧವುಂಟಾಗುವದಾಗಿ ರಷ್ಯ ಅಶಿಸಿದೆ.

ಂ ಂ

ಭಂತವುಂದ ಪರಿಸ್ಥಿತಿ ಹತೋಟಿಯಲ್ಲಿದೆಯೆಂದು, ಗಲಭೆಯಲ್ಲಿ ಕೆಲವರಿಗೆ ಗಾಯಗಳಾಗಿವೆ ಎಂದು, ಕೆಲವರ ಬಂಧನವಾಗಿದೆ ಎಂದು ನೇಪಾಳದ ಒಳ ಆಡಳಿತ ಮಂತ್ರಿ ಡಾ|| ಶಂಕರೀಗಿರಿ ಖಟಮಂಡುವಿನಲ್ಲಿ ತಿಳಿಸಿದರು ನೇಪಾಳಿ ಕಾಂಗ್ರೆಸಿನ ವೃತ್ತದ ಪ್ರಕಾರ ದಂಗೆಕೋರರು ನೇಪಾಳಿ ವಿಮಾನ ನಿಲ್ದಾಣ ನಾಶಮಾಡಿರುವರೆಂದು ವರದಿ.

ಂ ಂ

ಅಲಹಾಬಾದು ಉತ್ತರ ಕ್ಷೇತ್ರದ ಸಲಾವುದಾರರಿಗೆ ಕಾಂಗ್ರೆಸು ಕಾರ್ಯಕರ್ತರುಗಳು ಹೋಗಿದ್ದಾಗ ವಿರೋಧ ಗುಂಪಿನವರು ಇಟ್ಟಿಗೆ ಚೂರಿನಿಂದ ಹೊಡೆದು ಗಾಯಗೊಳಿಸಿದರು ಈಗವರು ಅಲಹಾಬಾದು ಆಸ್ಪತ್ರೆಗೆ ಸೇರಿದ್ದಾರೆ.

ಂ ಂ

ದಕ್ಷಿಣ ನೇಪಾಳದ ಜೈಲು ಬಂದೀಖಾನೆಯಿಂದ ಪರಾರಿ ಆದ ಸೂರು ಬಂದಿಗಳ ಪೈಕಿ 89 ಮಂದಿಯನ್ನು ಮತ್ತೆ ಹಿಡಿದಿದೆ 4 ಮಂದಿಯನ್ನು ಗುಂಡಿಕ್ಕಿ ಕೊಂದಿದೆ.

ವುಡ್‌ಲಾಂಡ್ಸ್ 9-2-62 ರಿಂದ
ಅಮೋಘ ಆರಂಭ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 4 ಪ್ರದರ್ಶನಗಳು]

ಆಪೆರಾ ಜಯಪ್ರದ 2 ನೇ ವಾರ

ಭೂಕೈಲಾಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್
ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ. [ದಿನವಹಿ 3 ಆಟಗಳು]

SHAKTI SUDHA

★

A Superb Tonic

Help ' The Gorakshana '

ಗೋರಕ್ಷಣ ಪ್ರಾಣಿಪಯೂ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅಪರ ಗುರುತು ನಕ್ಷತ್ರದ ಮುಂದೆ

ನ ಕ್ಷ ತ್ರ X ಹೀಗೆ ಸೀಲ್ ಮಾಡಿ

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.